**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 47/2024**

**ಪಿ.ಡಬ್ಲುಃ 9 ಸಿಡಬ್ಲುಃ10**

| | | |
|---|---|---|
| ಸಾಕ್ಷಿಯ ಹೆಸರು | : | ಜಿ.ನಂದೀಶ. |
| ತಂದೆಯ ಹೆಸರು | : | ಶಿವಕುಮಾರ ಸ್ವಾಮಿ |
| ವಯಸ್ಸು | : | 22 ವರ್ಷ. |
| ವೃತ್ತಿ | : | ಫೋಟೊಗ್ರಾಫರ. |
| ವಾಸಸ್ಥಳ | : | ಎತ್ತಿನಬೂಧಿಹಾಳ ಗ್ರಾಮ . |

**ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 07.03.2026.**

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

**1)** ಚಾಸಾ-**6, 11** ಹಾಗೂ **12** ರವರ ಪರಿಚಯ ಇದೆ. ಅವರು ಎಲ್ಲರೂ ನಮ್ಮ ಗ್ರಾಮನವರು. ಹಾಜರಿರುವ **1** ರಿಂದ **5** ನೇ ಆರೋಪಿತರ ಪರಿಚಯ ಇದೆ ಅವರು ಕೂಡ ನಮ್ಮ ಗ್ರಾಮನವರು. ನನಗೆ ಚಾಸಾ **1** ರವರ ಪರಿಚಯ ಇದೆ ಅವರ ಮಗಳ ಪಾರ್ವತಿ ಇವರ ಪರಿಚಯ ಇತ್ತು.

**2)** ದಿಃ **24.02.2024** ರಂದು ರಾತ್ರಿ **8.00** ಗಂಟೆಯ ಸುಮಾರಿಗೆ ಜಾತ್ರೆ ಮುಗಿಸಿಕೊಂಡು ನಮ್ಮ ಊರಿನ ಪೆದ್ದಮ್ಮನಗುಡಿ ಹತ್ತಿರ ನಾನು ಚಾಸಾ-**6, 11** ಹಾಗೂ **12** ಇದ್ದೆವು. ಆಗ ಪಾರ್ವತಿ ರವರನ್ನು ಒಂದು ಬೈಕನಲ್ಲಿ ಬಸವರಾಜ ಮತ್ತು ರಾಜು ಇನ್ನೊಂದು ಬೈಕನಲ್ಲಿ ಎರಿಸ್ವಾಮಿ, ಮೂರ್ತಿ ಹಾಗೂ ಗೋವಿಂದ ಕೂಡಿಸಿಕೊಂಡು ಹೋದರು. ಆಗ ರಾತ್ರಿ **09.00** ಗಂಟೆ ಆಗಿತ್ತು. ಆಗ ನಾವು ಕೂಗಿದೇವು ಅಷ್ಟರಲ್ಲಿ ಅವರು ಹೋಗಿ ಬಿಟ್ಟಿದ್ದರು. ಈ ವಿಷಯವನ್ನು ನನ್ನ ಮಾವ ಚಾಸಾ-**1** ರವರಿಗೆ ತಿಳಿಸಿದೆ ಅವರು ಪಾರ್ವತಿ ರವರನ್ನು ಹೊಡಿಕಾಡಲು ಹೋದರು. ನಂತರ ನಾನು ಮನೆಗೆ ಹೋದೆ. ಮೂರು ದಿವಸಗಳ ನಂತರ ಪಾರ್ವತಿ ಇವಳು ಬೆಂಕಿ ಹಚ್ಚಿಕೊಂಡು ಅತ್ಮಹತ್ಯೆ ಮಾಡಿಕೊಂಡ ವಿಷಯ ಗೊತ್ತಾಯಿತು. ಆ ದಿವಸ ಇದ್ದ **5** ಜನರು ಇಂದು ನ್ಯಾಯಾಲಯದ ಮುಂದೆ ಹಾಜರು ಇರುವ **1** ರಿಂದ **5** ನೇ ಆರೋಪಿತರು ಆಗಿರುತ್ತಾರೆ. ಅವರು ತಂದ ವಾಹನಗಳ ನೊಂದಣಿ ಸಂಖ್ಯೆಗಳನ್ನು ಹೇಳಲು ಬರುತ್ತದೆ. ಮೊದಲನೆ ವಾಹನ ಹೀರೊ ಹೊಂಡಾ ವಾಹನವಾಗಿದ್ದು ಅದರ ನೊಂದಣಿ ಸಂಖ್ಯೆ

ಕೆಎ-34-4812 ಹಾಗೂ ಇನ್ನೊಂದು ವಾಹನ ಸಂಖ್ಯೆ ಕೆಎ-34-0292. ಆ ವಾಹನಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸದರಿ ವಾಹನಗಳು ಈಗ ನೋಡತ್ತಿರುವ ನಿಪಿ-16 ಹಾಗೂ 17 ಭಾವ ಚಿತ್ರಗಳಲ್ಲಿ ಇವೆ. ಪಾರ್ವತಿ ಇವಳ ಮರಣ ಹೊಂದಿದ 5 ದಿನಗಳ ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

<u>ಪಾಟೀ ಸವಾಲು 2, 4 ಹಾಗೂ 5 ನೇ ಆರೋಪಿತರ ಪರವಾಗಿ ಶ್ರೀ ಬಿವಿಬಿ ವಕೀಲರಿಂದಃ</u>

3) ಚಾಸಾ 1 ಚನ್ನವೀರಪ್ಪ ರವರು ನನ್ನ ಹತ್ತಿರದ ಸಂಬಂಧಿ ಮತ್ತು ಮಾವ ಆಗ ಬೇಕು ಎಂದರೆ ಸರಿ. ನನ್ನ ಮನೆ ಕಟ್ಟೆಬಸವೇಶ್ವರ ಗುಡಿಯ ಹತ್ತಿರ ಮೂರನೇ ವಾರ್ಡ ನಲ್ಲಿ ಇದೆ ಎಂದರೆ ಸರಿ. ಪೆದ್ದಮ್ಮನ ಗುಡಿ 1 ನೇ ವಾರ್ಡ ನಲ್ಲಿ ಬರುತ್ತೆ ಎಂದರೆ ಸರಿ. ಪೆದ್ದಮ್ಮನಗುಡಿಗೂ ಹಾಗೂ ನಮ್ಮ ಮನೆಗೂ 4-5 ಫರ್ಲಾನ ಅಂತರ ಇದೆ ಮತ್ತು ನಮ್ಮ ಮನೆ ಬೇರೆ ಓಣಿಯಲ್ಲಿ ಇದೆ ಎಂದರೆ ಸರಿ. ಕಟ್ಟೆಬಸವೇಶ್ವರ ಗುಡಿ ದೊಡ್ಡ ಗುಡಿ ಆಗಿದ್ದು ಅದು ಐತಿಹಾಸಿಕ ಗುಡಿಯಾಗಿದೆ, ಪೆದ್ದಮ್ಮಗುಡಿ ಓಣಿಯಲ್ಲಿ ಇರುವ ಸಣ್ಣ ಗುಡಿ ಎಂದರೆ ಸರಿ. ಕಟ್ಟೆಬಸವೇಶ್ವರ ಗುಡಿ ದೊಡ್ಡ ಗುಡಿ ಆಗಿದ್ದರಿಂದ ಅಲ್ಲಿ ಜನರು ಜಾಸ್ತಿ ಇರುತ್ತಾರೆ ಎಂದರೆ ಸರಿ. ಪೆದ್ದಮ್ಮನ ಗುಡಿಯ ಹತ್ತಿರ ನನಗೆ ಏನು ಕೆಲಸ ಇರಲಿಲ್ಲ ಎಂದರೆ ಸರಿ. ನಾನು ಪ್ರತಿ ದಿವಸ ಪೆದ್ದಮ್ಮನ ಗುಡಿಗೆ ಬಂದು ಗೆಮ್ ಆಡುತ್ತ ಕುಳಿತುಕೊಳ್ಳುತ್ತೇನೆ. ಅಲ್ಲೆ ಇದ್ದ ಸಮುದಾಯಭಾವನ ಕಟ್ಟೆಯ ಮೇಲೆ ಗೆಮ್ ಆಡುತ್ತ ಕುಳಿತಿರುತ್ತೇನೆ. ನಾನು ಹಾಗೂ ದಾದಾ ಖಲಂದರ ಇಬ್ಬರು ಕೂಡಿ ಮೊಬೈಲ ಗೆಮ್ ಅಡುತ್ತಿದ್ದೆವು. ನಾನು ಮತ್ತು ದಾದಾ ಖಲಂದತರ ಕೂಡಿ ಒಟ್ಟಿಗೆ ಸೇರಿ ಅನಲೈನ್ ನಲ್ಲಿ ಗೆಮ್ ಆಡುತ್ತಿದ್ದೇವು. ಆನ್ ಲೈನ್ ಗೆಮ್ ಆಡುವಾಗ ಆಟದ ಕಡೆ ಲಕ್ಷ ಕೇಂದ್ರ ಎಂದರೆ ಸರಿ. ಗೆಮ ಆಡುವಾಗ ಲಕ್ಷ ಬೇರೆ ಕಡೆ ಹೋದರೆ ಅವರು ಸೋಲುತ್ತಾರ ಎಂದರೆ ಸರಿ. ಪೆದ್ದಮ್ಮಗುಡಿಯ ಹತ್ತಿರ ದ್ವಿಚಕ್ರ ವಾಹನದಲ್ಲಿ ಬಹಳಷ್ಟು ಜನರ ಓಡಾಡುತ್ತಾರೆ ಎಂದರೆ ಸರಿಯಲ್ಲ ಓಣಿಯಲ್ಲಿ ಇದ್ದ ಜನರ ತಮ್ಮ ದ್ವಿಚಕ್ರ ವಾಹನದ ಮೇಲೆ ಓಡಾಡುತ್ತಾರೆ ಎಂದರೆ ಸರಿ. ಪಾರ್ವತಿ ಅಲ್ಲಿ ರಾತ್ರಿ 09.00 ಗಂಟೆಗೆ ಬಂದಳು. ನಾನು ಅವಳ ಜೊತೆ ಮಾತನಾಡಲಿಲ್ಲ. ಪೆದ್ದಮ್ಮನಗುಡಿಗೆ ರಾತ್ರಿ ಸಮಯದಲ್ಲಿ ಯಾರೂ ಯಾರೂ ಬಂದು ಹೋದರು ಎಂದು ನಾನು ಗಮನಿಸಿಲ್ಲ. ನನ್ನ ಮಾವ ಚನ್ನವೀರಪ್ಪ ಪೆದ್ದಮ್ಮನಗುಡಿಯ ಹತ್ತಿರ ಬಂದಿರಲಿಲ್ಲ. ಪಾರ್ವತಿ ಇವಳು ಮೊಟರ

ಸೈಕಲ್ ಮೇಲೆ ಹೋದಳು ಎಂದು ಹೇಳಲಾದ ಸಮಯದಲ್ಲಿ ಅವಳು ಚೀರಾಡುವುದು ಮತ್ತು ಓದರಾಡುವುದು ಮಾಡಿರಲಿಲ್ಲ. ಚಾಸಾ 1 ಇವರಿಗೆ ನಾನೆ ಮನೆಗೆ ಹೋಗಿ ತಿಳಿಸಿರುತ್ತೇನೆ. ಚಾಸಾ 1 ರವರ ಜೊತೆಗೆ ನಾನು ಪಾರ್ವತಿ ಇವಳನ್ನು ಹುಡುಕಾಡಲು ಹೋಗಿರಲಿಲ್ಲ.

**4.** ಆ ದಿವಸ ಕತ್ತಲು ಇದ್ದುದರಿಂದ ಯಾವ ವಾಹನ ಯಾವ ಬಣ್ಣದು ಇತ್ತು ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಹೇಳುವುದೇನೆಂದರೆ ಅಲ್ಲಿ ಬೆಳಕು ಇತ್ತು. ಕತ್ತಲಿನಲ್ಲಿ ವಾಹನಗಳ ನೊಂದಣಿ ಸಂಖ್ಯೆ ಯನ್ನು ನೋಡಲು ಆಗುವುದಿಲ್ಲ ಎಂದರೆ ಸಾಕ್ಷಿ ಒಂದು ವಾಹನದ ನೊಂದಣಿ ಸಂಖ್ಯೆಯನ್ನು ನೋಡಿದ್ದೇನೆ. ಇನ್ನೊಂದು ವಾಹನದ ನೊಂದಣಿ ಸಂಖ್ಯೆ ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಪೋಲಿಸ ಠಾಣೆಗ ನನ್ನನ್ನು ಕರೆಯಿಸಿ ಆರೋಪಿತರ ವಾಹನವನ್ನು ತೋರಿಸಿರುತ್ತಾರೆ. ಯಾವ ದಿನಾಂಕದಂದು ಪೋಲಿಸರು ಕರೆಸಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-**16** ಹಾಗೂ **17** ಭಾವಚಿತ್ರ ಗಳಲ್ಲಿ ನಾನು ಇರುವುದಿಲ್ಲ. ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಠಾಣೆಗೆ ಕರೆಯಿಸಿ ವಾಹನಗಳು ತೋರಿಸಿದ್ದರು ಎಂದು ಹೇಳಿಲ್ಲ.

**5.** ದಿಃ **24.02.2024** ರಂದು ಪೆದ್ದಮ್ಮನಗುಡಿಯ ಹತ್ತಿರ ರಾತ್ರಿ **8.00-9.00** ಗಂಟೆ ಸುಮಾರಿಗೆ ನಾನು ಚಾಸಾ-**6, 11** ಹಾಗೂ **12** ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು **2** ವಾಹನಗಳ ಮೇಲೆ ಪಾರ್ವತಿ ರವಳನ್ನು ಕರೆದುಕೊಂಡು ಹೋದರು, ನಾನು ಕೂಗಿದೆ ಅಷ್ಟರಲ್ಲಿ ಅವರು ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ನಾನು ಆ ಸ್ಥಳದಲ್ಲಿ ಇರಲಿಲ್ಲ, ನಾನು ಏನನ್ನು ನೋಡಿಲ್ಲ, ಪಾರ್ವತಿ ಇವಳ ನನಗೆ ಸೊಸೆ ಆಗಬೇಕು, ಅದ್ದರಿಂದ ಚಾಸಾ **1** ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ನನ್ನ ಜೊತೆ ಚಾಸಾ**1** ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಚಾಸಾ **1** ರವರು ಹೇಳಿದ ಹಾಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಮ್.ಎ.ಬಿ ವಕೀಲರಿಂದ **1** ಹಾಗೂ **3** ನೇ ಆರೋಪಿತರ ಪರವಾಗಿ ಶ್ರೀ.ಎಂ.ಎ.ಬಿ ವಕೀಲರು ಶ್ರೀ ಬಿ.ವಿ.ಬಿ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರು ವಿಚಾರಣೆಃ-

ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.